ಮತ್ತು ಹೆಚ್ಚಿನ ವೇಗ ಮತ್ತು ನಿರ್ಲಕ್ಷ್ಯದಿಂದ ವಾಹನವನ್ನು ಓಡಿಸುವ ಚಾಲಕ ಹಾಗೂ ಪಾನಮತ್ತರಾಗಿ ಮಾಡಿದ್ದು ರುಜುವಾತಾಗಿದ್ದಲ್ಲಿ ಅಲ್ಲದೆ ಇದರಿಂದಾಗಿ ಪ್ರಾಣ ಕಳೆದುಕೊಂಡವರು, ಗಾಯಗೊಂಡಿದ್ದು ಕಂಡು ಒಂದಲ್ಲಿ ಅಂತಹ ಚಾಲಕರ ಮೇಲೆ ಕೆಲಸದಿಂದ ತೆಗೆದುಹಾಕುವಂತಹ ತೀವ್ರವಾದ ಶಿಕ್ಷೆಯನ್ನು ವಿಚಾರಣೆಗೆ ಒಳಪಡಿಸಿದ ನಂತರ ಕೈಗೊಳ್ಳಲಾಗುತ್ತಿದೆ.

ಆ. ಇದರ ಜೊತೆಗೆ ಪ್ರಾಣಾಂತಿಕ ಅಪಘಾತಕ್ಕೀಡು ಮಾಡಿದ ಚಾಲಕರನ್ನು ಕೂಡಲೇ ಅಮಾನತ್ತುಗೊಳಿಸಿ ಮುಂದಿನ ಶಿಸ್ತು ಕ್ರಮಗಳನ್ನು ಅನುಸರಿಸಲಾಗುತ್ತಿದೆ.

ಇ. ಹೆಚ್ಚಿನ ಅಪಘಾತಕ್ಕೀಡು ಮಾಡಿದ ಚಾಲಕರನ್ನು ಪೋಲೀಸ್ ಇಲಾಖೆಯಲ್ಲಿ ನೀಡುವ ಚಾಲಕ ತರಬೇತಿ ಶಿಕ್ಷಣ ಕೇಂದ್ರಕ್ಕೆ ಮತ್ತು ಸಂಸ್ಥೆಯ ರಿಫ್ರೆಷರ್ ತರಬೇತಿಗಾಗಿ ಕಳುಹಿಸಲಾಗುತ್ತಿದೆ.

ಈ. ಚಾಲಕರ ನೇಮಕಾತಿಯನ್ನು ಕ್ರಮಬದ್ಧಗೊಳಿಸಲು ಹಾಗೂ ಅನುಭವವುಳ್ಳ ಚಾಲಕರನ್ನು ನೇಮಿಸಲು ಸಂದರ್ಶನದಲ್ಲಿ ಕಠಿಣತಮವಾದ ಪರೀಕ್ಷೆ ನಡೆಸಲಾಗುವುದು.

ಉ. ಚಾಲಕರ ನೇಮಕಾತಿಯ ವಯೋಮಿತಿಯನ್ನು 21ರಿಂದ 24ಕ್ಕೆ ಏರಿಸಲಾಗಿದೆ.

ಊ. ಹೊಸದಾಗಿ ನೇಮಕಾತಿ ಮಾಡಿದ ಚಾಲಕರು ತಮ್ಮ ದೈನಂದಿನ ಕಾರ್ಯ ನಿರ್ವಹಿಸುವ ಮುನ್ನ ಕ್ಷೇಮಕರವಾದ ಚಾಲನೆ ಹಾಗೂ ಶಿಸ್ತುಗಳ ಬಗ್ಗೆ ಸೂಕ್ತ ತರಬೇತಿ ನೀಡಲಾಗುತ್ತಿದೆ.

ಋ. ಪ್ರಯಾಣಿಕರ ಸುಖಕರ ಪ್ರಯಾಣಕ್ಕಾಗಿ ಅಪಘಾತ ರಹಿತ ಚಾಲಕರಿಗೆ ಬೆಳ್ಳಿಪದಕ ಮತ್ತು ಮುಖ್ಯಮಂತ್ರಿಯವರ ಚಿನ್ನದ ಪದಕ ಕೊಟ್ಟು ಪ್ರೋತ್ಸಾಹಿಸಲಾಗುತ್ತಿದೆ.

ತಾಲ್ಲೂಕುಗಳಲ್ಲಿ ಕ್ರೀಡಾಂಗಣಗಳ ನಿರ್ಮಾಣ.

575 (1312): ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಕ್ರೀಡಾಂಗಣ ಕಟ್ಟಲು ಸರ್ಕಾರ ನಿರ್ಧರಿಸಿದೆ ?

ಶ್ರೀ ಹೆಚ್. ವಿಶ್ವನಾಥ್ (ಕನ್ನಡ ಮತ್ತು ಸಂಸ್ಕೃತಿ ಹಾಗೂ ಯುವಜನ ಸೇವಾ ಮತ್ತು ಕ್ರೀಡಾ ರಾಜ್ಯ ಸಚಿವರು):–

ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಕ್ರೀಡಾಂಗಣಗಳನ್ನು ಕಟ್ಟಲು ಸರ್ಕಾರ ಯೋಜಿಸಿದೆ.

ರಾಜ್ಯಗಳಲ್ಲಿರುವ ಅಕಾಡೆಮಿಗಳ ಅಭಿವೃದ್ಧಿ

576 (1291): ಶ್ರೀ ಹೆಚ್. ಎಂ. ರೇವಣ್ಣ (ಮಾಗಡಿ)

ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಆ. ರಾಜ್ಯದಲ್ಲಿರುವ ಅಕಾಡೆಮಿಗಳ ಅಭಿವೃದ್ಧಿಗಾಗಿ ಹಾಗೂ ಅವು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುವಂತೆ ಮಾಡಲು ಸರ್ಕಾರ ಏನು ಕ್ರಮ ತಗೆದುಕೊಂಡಿದೆ ?